ಮೊದಲನೆಯದ್ದು ಟೀಮ್, ಎರಡನೆಯದ್ದು ಸ್ಕ್ರಿಪ್ಟ್. ಸ್ಕ್ರಿಪ್ಟ್ ಇಷ್ಟ ಆಯ್ತು ಅಂದರೆ ಹತ್ತೇ ನಿಮಿಷದ ಸ್ಕ್ರೀನ್‌ಸ್ಪೇಸ್ ಇದ್ದರೂ ನಾನು ನಟಿಸುತ್ತೇನೆ. ಅದು ಹೊಸಬರದ್ದು ಅಂದರೂ, ದೊಡ್ಡ ನಿರ್ದೇಶಕರದ್ದಾದರೂ ಮಾಡ್ತೀನಿ.

ತಂಡ ಕೂಡ ನನಗೆ ಅಷ್ಟೇ ಮುಖ್ಯ. ಯಾಕೆಂದರೆ ನಾನು ತುಂಬ ಸರಳ, ಸಾಮಾನ್ಯ ಹುಡುಗಿ. ಈವತ್ತಿನವರೆಗೂ ನನಗೆ ನಾನೇನೋ ಹೀರೊಯಿನ್, ನನ್ನನ್ನು ಎಲ್ಲರೂ ಬೇರೆ ರೀತಿ ನೋಡಬೇಕು ಎಂಬುದು ನನ್ನ ತಲೆಯಲ್ಲಿ ಇಲ್ಲ, ಅದು ಬರುವುದೂ ಇಲ್ಲ. ನಾನು ಎಲ್ಲರ ಜೊತೆ ಮಾತಾಡುತ್ತ, ಬೆರೆಯುತ್ತ ಇರುವ ಮನಸ್ಥಿತಿಯವಳಾಗಿದ್ದರಿಂದ ತಂಡದಲ್ಲಿ ನೆಗೆಟಿವಿಟಿ ಇದ್ದರೆ, ಇಗೊ ಪ್ರಾಬ್ಲಮ್‌ಗಳಿದ್ದರೆ ಅಲ್ಲಿ ಕೆಲಸ ಮಾಡುವುದು ನನಗೆ ಕಷ್ಟವಾಗುತ್ತದೆ. ಹಾಗಾಗಿ ನಾನು ಟೀಮ್ ಬಗ್ಗೆ ವಿಚಾರಿಸಿ, ಗಮನಿಸಿ, ನನಗೆ ಕಂಫರ್ಟ್ ಅನಿಸಿದರೆ ಮಾತ್ರವೇ ಒಪ್ಪಿಕೊಳ್ಳುತ್ತೇನೆ.

**◆ ಈಗ ಕನ್ನಡದ ನಾಯಕಿಯರ ಸಿನಿಮಾಪಟ್ಟಿ ಗಮನಿಸಿದರೆ ಅವುಗಳಲ್ಲಿ ಕೆಲವಾದರೂ ಕಂಟೆಂಟ್ ಪ್ರಧಾನ ಸಿನಿಮಾಗಳಿರುತ್ತವೆ. ಈ ಬೆಳವಣಿಗೆಯ ಬಗ್ಗೆ ನಿಮಗೆ ಏನನಿಸುತ್ತದೆ?**

ತುಂಬ ಖುಷಿಯಾಗುತ್ತದೆ. ಹಿಂದೆ ಹೀಗೆಯೇ ಇತ್ತು. ಅದು ಎಲ್ಲೋ ಒಂದು ಹಂತದಲ್ಲಿ ಪೂರ್ತಿಯಾಗಿ ಹೋಗಿಬಿಟ್ಟಿತ್ತು. ಈ ಕೊರೊನಾ ಸಮಯದಲ್ಲಿ ಒಟಿಟಿ ಹಾವಳಿ ಜಾಸ್ತಿ ಆಯ್ತು. ಚಿಕ್ಕ ಬಾವಿಯಲ್ಲಿರುವ ನಾವೆಲ್ಲರೂ ಸಮುದ್ರ ನೋಡಿಬಿಟ್ಟೆವು. 'ಓ ಮೈ ಗಾಡ್, ಏನೇನೆಲ್ಲ ನಡೀತಿದೆ ಈ ಪ್ರಪಂಚದಲ್ಲಿ, ನಾವಿನ್ನೂ ಎಲ್ಲಿದೀವಿ?' ಎಂಬ ಪ್ರಶ್ನೆ ನಮ್ಮೆಲ್ಲರನ್ನೂ ಕಾಡಿದೆ. ಹಾಗಾಗಿ ಏನಾದರೂ ಹೊಸದನ್ನು ಮಾಡಬೇಕು ಎಂಬ ಹಂಬಲ ಮೂಡಿದೆ.

ನನ್ನ ಪ್ರಕಾರ ಸಿನಿಮಾ ಅನ್ನುವುದು ನಮ್ಮ ಭಾಷೆಗೆ ನಾವು ಮಾಡುವಂಥ ಸೇವೆ; ನಮ್ಮ ನಾಡಿನ ಸೇವೆ. ಸಿನಿಮಾ ಮೂಲಕ ನಮ್ಮ ಭಾಷೆ, ಸಂಸ್ಕೃತಿ ಬೆಳೆಯುತ್ತದೆ. ಹಾಗಾಗಿ ನಾವೊಂದು ವಿಶೇಷವಾಗಿ, ವಿಭಿನ್ನವಾದದ್ದನ್ನು ಮಾಡಲು ಪ್ರಯತ್ನಿಸುವುದರಿಂದ ದೊಡ್ಡ ಮಟ್ಟದಲ್ಲಿ ಬದಲಾವಣೆ ಸಂಭವಿಸುತ್ತದೆ ಎಂಬುದು ನನ್ನ ನಂಬಿಕೆ.

**◆ ಒಟ್ಟೊಟ್ಟಿಗೇ ಎಂಟ್ಹತ್ತು ಪಾತ್ರಗಳನ್ನು ನಿಭಾಯಿಸುವುದು ಕಷ್ಟವಲ್ಲವೇ?**

ನಾನು ತುಂಬ ಸೂಕ್ಷ್ಮ ಮನಸ್ಸಿನ, ತುಂಬ ಭಾವುಕ ಹುಡುಗಿ. ನನಗೆ ಯಾವುದೇ ಒಂದು ಪಾತ್ರದ ಸೀನ್‌ಪೇಪರ್ ಕೊಟ್ಟ ತಕ್ಷಣ, ಆ ಪಾತ್ರದ ಬಟ್ಟೆ ಧರಿಸಿದ ತಕ್ಷಣ ನಾನು ಆ ಪಾತ್ರವೇ ಆಗಿಹೋಗಿರುತ್ತೇನೆ. ಒಂದೊಂದು ಸಿನಿಮಾದಲ್ಲಿ ನನ್ನ ಪಾತ್ರ ಮೌನಿಯಾಗಿರುತ್ತದೆ, ಆ ಇಡೀ ದಿನ ನಾನೂ ಮೌನಿಯೇ ಆಗಿಬಿಟ್ಟಿರುತ್ತೇನೆ. ಒಂದೊಂದು ಸಿನಿಮಾದಲ್ಲಿ ತುಂಬ ಮಾತಾಡಬೇಕಾಗುತ್ತದೆ, ಇಡೀ ದಿನ ಮಾತಾಡುತ್ತಲೇ ಇರುತ್ತೀನಿ. ನಟನೆ, ನಿದ್ದೆ ಎರಡರಲ್ಲಿಯೂ ಅಷ್ಟೆ, ನಾನು ತುಂಬ ಬೇಗ ಸ್ವಿಚಾನ್ ಸ್ವಿಚಾಫ್ ಆಗುತ್ತೇನೆ. ಎಷ್ಟು ಹೊತ್ತಿಗೆ ಬೇಕಾದರೂ ನಿದ್ರೆ ಮಾಡ್ತೀನಿ, ಎಷ್ಟು ಹೊತ್ತಿಗೆ ಬೇಕಾದ್ರೂ ಎದ್ದೇಳ್ತೀನಿ!

**◆ ನೀವು ಸೂಪರ್ ಸ್ಟಾರ್‌ಗಳ ಜೊತೆಗೆ ಸಿನಿಮಾ ಮಾಡಿಲ್ಲ. ಇದರ ಬಗ್ಗೆ ನಿಮಗೆ ಬೇಜಾರಿದೆಯೇ?**

ಖಂಡಿತ ಇಲ್ಲ. ನನ್ನನ್ನು ನಂಬಿ, ಪ್ರೀತಿಯಿಂದ ಯಾರು ಸಿನಿಮಾ ಕೊಡ್ತಾರೋ ಅವರು, ಅಂದರೆ ಸಿನಿಮಾ ಕೊಟ್ಟವರು ಮತ್ತು ಸಿನಿಮಾ ಎರಡೂ ದೇವರು ಎಂದುಕೊಂಡು ನಾನು ಕೆಲಸ ಮುಗಿಸಿಕೊಡ್ತೀನಿ. ನನ್ನಿಂದ ಅವರಿಗೆ ಸುಂದರ ನೆನಪುಗಳು ಸಿಗಬೇಕು. ನಾನು ಅವರ ಬದುಕಿನ ಖುಷಿಯ ನೆನಪಾಗಿ ಉಳಿದುಕೊಳ್ಳಬೇಕು.

ನನಗೆ ಸ್ಟಾರ್‌ಗಳ ಜೊತೆಗೆ ನಟಿಸಬೇಕು ಅನ್ನುವುದಕ್ಕಿಂತ, ಸ್ಟಾರ್‌ಗಳನ್ನು ರೂಪಿಸುವ ಎಲ್ಲ ಅತ್ಯುತ್ತಮ ನಿರ್ದೇಶಕರ ಜೊತೆಗೂ ಕೆಲಸ ಮಾಡಬೇಕು ಎಂಬ ಆಸೆ ಇದೆ. ನನ್ನ ನಟನೆಯನ್ನು ನೋಡಿ ಜನರು, 'ವಾವ್! ಏನ್ ಚೆನ್ನಾಗಿ ಆ್ಯಕ್ಟ್ ಮಾಡಿದಾಳೆ' ಅಂತ ಹೇಳಬೇಕು, ಅಂಥ ಪಾತ್ರಗಳನ್ನು ಸೃಷ್ಟಿಸುವ ನಿರ್ದೇಶಕರ ಜೊತೆಗೆ ಕೆಲಸ ಮಾಡಬೇಕು ಎಂದು ನನಗೆ ತುಂಬ ಆಸೆ ಇದೆ. ■



# ಕಸ್ತೂರ ಬಾ ರೂಪದಲ್ಲಿ ಹರಿಪ್ರಿಯಾ

ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ತಾಯಿ ಕಸ್ತೂರ ಗಾಂಧಿ' ಸಿನಿಮಾದಲ್ಲಿ ಕಸ್ತೂರ ಬಾ ಪಾತ್ರದಲ್ಲಿ ಹರಿಪ್ರಿಯಾ ನಟಿಸುತ್ತಿದ್ದಾರೆ ಎಂಬ ಸುದ್ದಿ ತಿಳಿದಾಗಿನಿಂದ, ಅವರು ಆ ಪಾತ್ರದಲ್ಲಿ ಹೇಗೆ ಕಾಣಿಸಿಕೊಳ್ಳಬಹುದು ಎಂಬ ಕುತೂಹಲವಿತ್ತು. ಆ ಕುತೂಹಲಕ್ಕೀಗ ತೆರೆ ಬಿದ್ದಿದೆ. ಕಸ್ತೂರ ಬಾ ಪಾತ್ರದ ಫಸ್ಟ್ ಲುಕ್ ಬಿಡುಗಡೆಯಾಗಿದೆ. ಕಸ್ತೂರ ಬಾ ಅವರ ಮೂರು ವಯೋಮಾನದ ಪಾತ್ರಗಳ ಲುಕ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ಎಳೆಯ ಪ್ರಾಯ, ನಡುವಯಸ್ಸು ಮತ್ತು ವೃದ್ಧೆ ಕಸ್ತೂರ ಪಾತ್ರದಲ್ಲಿ ಹರಿಪ್ರಿಯಾ ಕಾಣಿಸಿಕೊಂಡಿದ್ದಾರೆ.

'ಒಂದು ದಿನ ಬರಗೂರು ರಾಮಚಂದ್ರಪ್ಪ ಅವರು ನಮ್ಮ ಮನೆಗೆ ಬಂದು, ಕಸ್ತೂರ ಬಾ ಬದುಕನ್ನು ಆಧರಿಸಿದ ಕಾದಂಬರಿಯನ್ನು ಓದಲು ಕೊಟ್ಟರು. ಅದನ್ನು ಓದಿಮುಗಿಸಿ ಕರೆ ಮಾಡಿದಾಗ, 'ನಾನು ಕಸ್ತೂರ ಬಾ ಅವರ ಬದುಕನ್ನು ಸಿನಿಮಾ ಮಾಡಲು ಹೊರಟಿದ್ದೇನೆ. ನೀವೇ ಕಸ್ತೂರ ಬಾ ಪಾತ್ರದಲ್ಲಿ ನಟಿಸಬೇಕು ಎಂದು ಕೇಳಿಕೊಂಡರು. ಆಗ ನನಗಾದ ಖುಷಿ ಹೇಳತೀರದು. ಬಹುಶಃ ಭಾರತದ ಯಾವ ನಟಿಗೂ ಸಿಗದೆ ಇರುವ ಅವಕಾಶ ಇದು. ಈ ವಿಷಯದಲ್ಲಿ ನಾನು ಅದೃಷ್ಟವಂತೆ. ಖುಷಿಯಿಂದಲೇ ಒಪ್ಪಿಕೊಂಡೆ' ಎಂದು ನೆನಪಿಸಿಕೊಳ್ಳುವ ಹರಿಪ್ರಿಯಾ, ಚಿತ್ರೀಕರಣದ ಅನುಭವದ ಕುರಿತೂ ಅಷ್ಟೇ ಉತ್ಸುಕತೆಯಿಂದ ಮಾತಾಡುತ್ತಾರೆ.

'ಇದು ಎಷ್ಟು ಒಳ್ಳೆಯ ಅವಕಾಶವೋ ಅಷ್ಟೇ ಸವಾಲಿನ ಪಾತ್ರವೂ ಹೌದು. ನಮಗೆ ಗಾಂಧಿ ಬಗ್ಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಫೋಟೊಗ್ರಾಫ್‌ಗಳು ಸಿಗುತ್ತವೆ. ಆದರೆ ಕಸ್ತೂರ ಬಾ ಕುರಿತು ಅಷ್ಟಾಗಿ ವಿವರಗಳು ಸಿಗುವುದಿಲ್ಲ. ಆದರೆ ಈ ವಿಷಯದಲ್ಲಿ ನನಗೆ ಬರಗೂರು ಅವರು ಸಾಕಷ್ಟು ಮಾರ್ಗದರ್ಶನ ಮಾಡಿದ್ದರು. ಯಾವ ದೃಶ್ಯದಲ್ಲಿ ನನ್ನ ಪಾತ್ರ ಹೇಗಿರಬೇಕು, ಯಾವ ಬಟ್ಟೆ ತೊಟ್ಟುಕೊಳ್ಳಬೇಕು ಎಂಬ ಕುರಿತೂ ಅವರಿಗೆ ತುಂಬ ಸ್ಪಷ್ಟವಾದ ಕಲ್ಪನೆ ಇತ್ತು. ಹಾಗಾಗಿ ನನಗೆ ಸಾಕಷ್ಟು ಸುಲಭವಾಯಿತು. ಈ ಪಾತ್ರದಲ್ಲಿ ಇನ್ನೊಂದು ಸವಾಲೆಂದರೆ ಮೂರು ಬೇರೆ ಬೇರೆ ಲುಕ್‌ಗಳಲ್ಲಿ, ಮನಸ್ಥಿತಿಗಳಲ್ಲಿ ನಟಿಸಬೇಕು. ನಾವು ಆಡುವ ಮಾತುಗಳು ನಮ್ಮ ಮನಸ್ಥಿತಿಯನ್ನು, ಪ್ರಬುದ್ಧ ಗುಣವನ್ನು ತೋರಿಸುತ್ತಿರುತ್ತವೆ. ಈ ಪಾತ್ರದಲ್ಲಿಯೂ ಅಷ್ಟೆ, ಮಾತು ಒಂದೇ ಆದರೂ ಆಡುವ ರೀತಿ ಬೇರೆ ಬೇರೆ ಆಗಿರುತ್ತದೆ. ಈ ಸೂಕ್ಷ್ಮವನ್ನು ಗಮನಿಸಿಯೇ ಅಭಿನಯಿಸಬೇಕಾಗಿತ್ತು. ಈ ಹಂತದಲ್ಲಿಯೂ ನಿರ್ದೇಶಕರ ಮಾರ್ಗದರ್ಶನವೇ ನನ್ನ ಕೈಹಿಡಿದಿದ್ದು' ಎಂದು ಹೇಳಿಕೊಳ್ಳುತ್ತಾರೆ ಹರಿಪ್ರಿಯಾ.

ಈಗಾಗಲೇ ಚಿತ್ರದ ಚಿತ್ರೀಕರಣ ಮತ್ತು ಡಬ್ಬಿಂಗ್ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್‌ನ ಕೆಲವು ಕೆಲಸಗಳು ಬಾಕಿ ಇದ್ದು, ಅದರ ನಂತರ ಬಿಡುಗಡೆಯ ಕುರಿತು ಯೋಜನೆ ಹಾಕಿಕೊಳ್ಳುವ ಆಲೋಚನೆಯಲ್ಲಿ ಚಿತ್ರತಂಡ ಇದೆ. ■